ಪ್ರಬಂಧ

ಕಲೀಮ್ ಉಲ್ಲಾ
ಕಲೆ: ಪ್ರವೀಣ್ ಆಚಾರ್ಯ

# ಪಾಟಿ ಸವಾಲಿನ ಜಯಮ್ಮ

"ನೀ ಮನೆಗೆ ಬಂದು ನೋಡು. ಎಂ.ಎ ಓದಿರೋ ನಂಗೆ ಎಸ್ಸೆಸ್ಸೆಲ್ಸಿ ಫೇಲಾದಾಕಿ ಯಂಗ್ ಬಾಯ್ಮುಚ್ಚುಸ್ತಾಳೆ'' ಅಂತ ಗೆಳೆಯ ಗುಡ್ಡಪ್ಪ ಸದಾ ಗೊಣಗುತ್ತಲೇ ಇದ್ದ. ಹೆಂಡತಿ ಮೇಲೆ ಹೀಗೆ ದೂರು ಹೇಳುವಾಗ ಅವನ ಮುಖ ಜಟಿಲ ಮೂಲವ್ಯಾಧಿ ಸಮಸ್ಯೆಯವರ ತರಹ ಇರುತ್ತದೆ. ನಾನೊಮ್ಮೆ, "ಅಲ್ಲೋ, ಅವರಪ್ಪ ಮೇಷ್ಟ್ರು ಅಂತಿ, ಮಗಳಿಗೆ ಇಷ್ಟೇನಾ ಓದಿಸಿರೋದು" ಎಂದೆ. ಒಂದಿಂಚೂ ವಿಚಲಿತವಾಗದೆ, "ಮೇಷ್ಟ್ರು ಮಕ್ಕಳು ದಡ್ಡರು'' ಅನ್ನೋ ಗಾದೆ ಐತಲ್ಲೋ, ಇದು ಅದೇ ಕೇಸು. ಹೆಚ್ಚು ಓದಿದವರೇ ಪಾಡು. ಈ ಕಮ್ಮಿ ಓದಿದವರ ಬಾಯಾಗೆ ಬಿದ್ರೆ ಎದೀ ಹೊಡ್ಕೊಂಡೇ ಸಾಯ್ಬೇಕು" ಎಂದು ಮತ್ತೆ ಮುಖ ಕಿರಿದು ಮಾಡಿಕೊಂಡ.

ಜಗದ ಅನೇಕ ಗಂಡಸರು, "ನಾ ಇವಳನ್ನು ಮದುವೆಯಾಗಿ ಮೋಸ ಹೋದೆ. ಈಕೆ ಹೀಗೆಂತ ಮೊದ್ಲೆ ಗೊತ್ತಿದ್ದರೆ ನಾ ಆಗ್ತಾನೆ ಇರ್ಲಿಲ್ಲ. ಮೊದಮೊದಲು ಮಳ್ಳೀ ಥರ ಇದ್ಲು. ಈಗೀಗ ಚಂಡಿ ಭಂಡಿ ಆಗ್ತ್ಯಾಳೆ. ಮೈಮೇಲೆ ಎಗರಿ ಬರ್ತ್ಯಾಳೆ. ಈಕಿ ಸಾವಾಸ ತಪ್ಪಿದ್ದರೆ ನಂಗೆ ದೇವಲೋಕದ ಅಪ್ಸರೆ ಕಾಯುತ್ತಿದ್ದಳು" ಎನ್ನುವ ಗೊಣಗಾಟದವರು. ಆದರೆ, ಗುಡ್ಡಪ್ಪ ಈ ಪೈಕಿಯ ಮನುಷ್ಯನಲ್ಲ. ಹುಡುಗಿ ಮೆಚ್ಚಿ ದೊಡ್ಡ ಕಲ್ಯಾಣ ಮಂಟಪದಲ್ಲಿ ಲಗ್ನವಾದವನು. ಈತನಿಗೆ ಸಿಕ್ಕ ಜಯಮ್ಮ ನಾ ತಿಳಿದಂತೆ ತುಂಬಾ ಮುಗ್ಧ ಹೆಣ್ಮಮಗಳು. ಇಷ್ಟು ಸರಳ ಮನಸ್ಸಿನ ಹೆಂಡತಿಯೆದುರು ವಾದ ಪ್ರತಿವಾದದಲ್ಲಿ ಗೆಲ್ಲಲಾಗದೆ ಗೆಳೆಯ ಯಾಕೆ ಸೋತು ಸುಣ್ಣವಾಗುತ್ತಿದ್ದ ಎಂಬುದೇ ಅರ್ಥವಾಗುತ್ತಿರಲಿಲ್ಲ.

"ಲೆಕ್ಚರರ್ ಆಗಿ ಸಾವಿರಾರು ಹುಡುಗರಿಗೆ ಪಾಠ ಮಾಡಿದವ ನೀನು. ಯಾಕಲೆ ಆಪಾಟಿ ಹೆದರ್ತಿ ಮಂಗ್ಯಾ" ಎಂದು ನಾನೆಂದರೆ, "ಲೇ ನೀನು ಏನ್ ಹೇಳಿದ್ರೂ ಅದಕ್ಕೆ ತದ್ವಿರುದ್ಧದ ಉತ್ತರ ಆಕಿ ಹತ್ರ ರೆಡಿ ಇರ್ತದೋ. ನೀ ಏನಾರ ಹೇಳು, ಆಕಿ ಮಾತಿಗೆ ಮಾತು ಬದಲಿಸದಿದ್ರೆ ಮೀಸೆ ಬೋಳಿಸ್ಕೊತೀನಿ. ಅವಳೋ ಅವಳ ಭಯ ಭಕ್ತಿಯೋ! ವಿಚಿತ್ರ ಹರಕೆಗಳೋ! ಕಿರಿಕಿರಿ ನಂಬಿಕೆಗಳೋ! ಒಟ್ಟು ನಾ ಸಾಕಾಗಿ ದಿವಾಳಿ ಹುಚ್ಮಲ್ಲ ಆಗಿದ್ದೀನೋ ಮಿತ್ರ" ಎಂದು ಬೇಸರದ ಚಾಡಿ ಚುಚ್ಚಿದ್ದ. ನಾನು ಈ ಮಾತನ್ನು ಪೂರ್ಣ ನಂಬಲು ಸಿದ್ಧನಿರಲಿಲ್ಲ. ಅದಕ್ಕೆ ಕಾರಣವೂ ಇತ್ತು.

"ಲೇ ನಾ ನೋಡಿಲ್ವ ನಿನ್ನ. ಘಳಿಗೆಗೆ ನಾಲ್ಕು ಸುಳ್ಳು ಹೇಳ್ತಿ. ಕುಂತ್ರೊಂದು ಸುಳ್ಳು ನಿಂತ್ರೊಂದು ಸುಳ್ಳು. ನಿನ್ನ

